ಬಳಿದು ಅಳು ಕಟ್ಟೆಯೊಡೆಯಿತು.

ಅಜ್ರ ತನ್ನ ತಲೆಯ ಮೇಲೆ ತೊಟ್ಟಿಕ್ಕುತ್ತಿರುವ ಬಿಸಿಹನಿಗಳಿಗೆ ಬೆಚ್ಚಿ ಕತ್ತೆತ್ತಿ ನೋಡಿದ. ಅಕ್ಕನ ಕಣ್ಣಲ್ಲಿ ನೀರು ಜಾರುತ್ತಿದೆ. ಮುಖ ಕೆಂಡದ ಸುಕ್ಕಾಗಿದೆ. ಟವಲು ಜಾರಿ ಹೋಗಿದೆ. ಅಕ್ಕನ ಅಗಲವಾದ ಮುಖ ಹೀಗೆ ಹಿಂಡಿದಂತಾಗಿರುವುದನ್ನು ನೋಡಿರಲಿಲ್ಲ. ಅವಳು ಹೀಗೆ ಸದ್ದು ಮಾಡದೆ ಅತ್ತದ್ದನ್ನು ಕಂಡಿರಲಿಲ್ಲ. ಅವನಿಗೂ ದುಃಖ ಬಂತು. ಅವನಿಗೆ ಅಪ್ಪ ಇಲ್ಲ ಅಂತಾಗಲೀ; ಅವ್ವ ಹಾಸಿಗೆ ಹಿಡಿದು ತಮಗೆ ಗಂಜಿ ಮಾಡಿಕೊಡುತ್ತಿಲ್ಲ ಅಂತಾಗಲೀ; ಲೇಔಟ್ ಗೇಟನ್ನು ತೆರೆಯುತ್ತಿಲ್ಲ ಅಂತಾಗಲೀ; ಇವತ್ತು ದಿನಸಿ ಸಿಗುತ್ತಿಲ್ಲ ಅಂತಾಗಲೀ ಅವನ ಅಳುವಿಗೆ ಕಾರಣವಾಗಿರಲಿಲ್ಲ. ಅಕ್ಕ ಒಬ್ಬಳೇ ಅಳುತ್ತಿದ್ದಾಳೆ, ಅದೂ ಉಸಿರು ಕಟ್ಟಿ ಕಟ್ಟಿ ಕಣ್ಣೀರು ಸುರಿಸುತ್ತಿದ್ದಾಳೆ. ಆ ಬಿಸಿನೀರು ತನ್ನ ತಲೆ, ಹಣೆ, ಮುಖದ ಮೇಲೆ ಹನಿಯುತ್ತಿರುವುದರಿಂದ ಅದನ್ನು ಒರೆಸಲು ಕೈ ಏಳುತ್ತಿಲ್ಲ ಎಂಬ ದುಗುಡ ಅಳುರೂಪದಲ್ಲಿ ಹೊರ ಉಕ್ಕತೊಡಗಿತು. ಅವನು ಸದ್ದು ಮಾಡುತ್ತ ಅಳತೊಡಗಿದ ಮೇಲೆಯೇ ಜರೀನಾಗೆ ತಾನು ನಡುರಸ್ತೆಯಲ್ಲಿದ್ದೇನೆ, ಅಳುತ್ತಿದ್ದೇನೆ, ಎದುರು ಮನೆಯ ಹಿರೀಕ ಮನೆಯಿಂದ ಹೊರ ಇಣುಕಿ ಮುಂದೆ ಹೋಗು ಎಂದು ಕೈ ಕುಣಿಸುತ್ತಿದ್ದಾನೆ ಎಂಬ ಅರಿವಾಗಿ ಒತ್ತೊತ್ತಿ ಬರುತ್ತಿದ್ದ ಅಳುವನ್ನು ಎದೆಭಾಗದಲ್ಲೇ ಬಿಗಿದೊತ್ತಿ ತಮ್ಮನ ಗಲ್ಲ ಹಿಡಿದುಕೊಂಡಳು.

ಜರೀನಾ ವೇದನೆ, ನಿರಾಶೆ, ಅಂಜಿಕೆಯ ಮುದ್ದೆಯಾಗಿ ತಮ್ಮನನ್ನು ಬಿಗಿದಪ್ಪಿಕೊಂಡು ಸುತ್ತಮುತ್ತ ನೋಡಿದಳು. ಆಗಲೇ ಮಧ್ಯಾಹ್ನ ಒಂದುಗಂಟೆಗೆ ಮೀರಿತ್ತು. ಕಳೆದೆರಡು ದಿನಗಳಲ್ಲಿ ಲೇಔಟ್ ಒಡೆಯ ಬೆಳಗ್ಗೆ 11 ಗಂಟೆಗೆ ದಿನಸಿ ಹಂಚಿದ್ದರಂತೆ. ಪ್ರತಿವರ್ಷ ತಮ್ಮ ಜನ್ಮದಿನದಂದು ಬಡಬಗ್ಗರಿಗೆ ಸೀರೆ, ರವಿಕೆ, ಸಕ್ಕರೆ ಹಂಚುತ್ತಿದ್ದ ದಾನಿ. ಈ ಸಲ ಕೊರೊನಾ ರೋಗದಿಂದ ತೊಂದರೆ ಅನುಭವಿಸುತ್ತಿರುವ ಅಸಹಾಯಕರಿಗೆ ದಿನಸಿ ಧಾನ್ಯ ನೀಡಲು ವ್ಯವಸ್ಥೆ ಮಾಡಿದ್ದರಂತೆ. ಮೊದಲೆರಡು ದಿನ ತಮ್ಮ ಶಾಲಾ ಕಾಲೇಜು, ಆಯಾ, ಅಟೆಂಡರು, ಡ್ರೈವರುಗಳಿಗೆ ನೀಡಿ, ಇವತ್ತಿನಿಂದ ಹೊರಗಿನವರಿಗೆ ಎಂದಿದ್ದರಂತೆ...

ಜರೀನಾ ಮಂಜಾಗಿದ್ದ ಕಣ್ಣನ್ನು ಟವಲಿನಂಚಿನಿಂದ ಉಜ್ಜಿಕೊಂಡು ನೋಡಿದಳು. ಈಗ ಗೇಟಿನ ಬಳಿ ಸೆಕ್ಯುರಿಟಿ ಕಾಣುತ್ತಿದ್ದ. ಅವನು ಏನು ಹೇಳಿದನೋ ಏನೋ ಕೆಲವರು ಪೆಚ್ಚುಮೋರೆ ಹಾಕಿಕೊಂಡು ಗುಂಪಿನಿಂದ ಸರಿಯುತ್ತಿದ್ದರು. ಇನ್ನೂ ಕೆಲವರು, ಗುಂಪು ಕಮ್ಮಿಯಾದ ಮೇಲೆ ಉಳಿದ ಕಡಿಮೆ ಜನರಿಗೆ ದಿನಸಿ ನೀಡಬಹುದೆಂಬ ನಿರೀಕ್ಷೆಯಿಂದ ನಿಂತೇ ಇದ್ದರು. ಮತ್ತೂ ಕೆಲವರು ಆತುರಾತುರದಿಂದ ಚೀಲ ಹಿಡಿದು ಅಡ್ಡರಸ್ತೆಯಿಂದ ಓಡಿ ಬರುತ್ತಲೇ ಇದ್ದರು. ಈ ಎಲ್ಲ ಗುಂಪುಗಳಿಂದ ದೂರ ನಿಂತಿದ್ದ ಜರೀನಾ ಗೇಟಿನ ಬಳಿ ಹೋಗಿ ನೋಡಲೇ ಅಂದುಕೊಂಡಳು. ಯಾಕೋ ಕಾಲೇಳಲಿಲ್ಲ. ಅಪ್ಪನ ಅಕ್ಕರೆ ರೂಢಿಮಾಡಿಬಿಟ್ಟಿದ್ದ ಸಂಕೋಚ, ನಾಚಿಕೆಯ ಮುದ್ದೆಯಾಗಿ ಅದರಿಂದ ಒತ್ತರಿಸಿ ಬಂದ ಸಂಕಟದಲ್ಲಿ ತಮ್ಮ ಸ್ಕೂಲಿನ ಮುಂದಲ ಧ್ವಜಸ್ತಂಬದಂತೆ ನಿಂತಳು.

ಅಪ್ಪನ ಉತ್ಕಟವಾಗಿದ್ದ ಆಸೆ, ಅಕ್ಕರೆ, ನಿರೀಕ್ಷೆಯ ಕವಚದೊಳಗೆ ಉಳಿದುಹೋಗಿದ್ದ ಅವಳೀಗ ನೀರಿನಿಂದ ಹೊರ ಎಸೆದ ಮೀನಿನಂತಾಗಿದ್ದಳು.

ಫಹೀಂಗೆ ಜ್ವರ ಬಂದ ಕಾರಣ ನೆರೆಹೊರೆಯವರು ಕಾರ್ಪೊರೇಷನ್ನವರಿಗೆ ತಿಳಿಸಿ ಅವರು ತಾಯಿ ಮಗಳು ಮಗ ಮೂವರನ್ನು ವ್ಯಾನ್ ಹತ್ತಿಸಿ ಕರೆದುಕೊಂಡು ಹೋಗಿದ್ದರು. ತಮ್ಮ ಮನೆಯಂತೆ ಗಾಳಿ ಬೆಳಕಿನ ಕೊರತೆಯಿದ್ದ ಯಾವುದೋ ರೂಮಿಗೆ ಬಿಟ್ಟು ಗುಂಪು ಗುಂಪು ಡಾಕ್ಟರುಗಳು ಬಂದು ಬಂದು ಪರೀಕ್ಷೆ ಮಾಡಿ ಆಮೇಲೆ ಕೊರೊನಾ ವೈರಾಣುವಿನ ಯಾವುದೇ ಲಕ್ಷಣ ಇಲ್ಲ. ಸಾಮಾನ್ಯ ಜ್ವರ, ನಿಶ್ಶಕ್ತಿಯಿದೆ. ಟಾನಿಕ್ ತಕ್ಕೊಳ್ಳಿ. ಧೈರ್ಯವಾಗಿ ಮನೆಗೆ ಹೋಗಿ ಎಂದು ಕಳಿಸಿದ್ದರು.

ಮನೆಯಲ್ಲಿ ಶೂನ್ಯ ತುಂಬಿತ್ತು. ಬರೀ ಕಗ್ಗತ್ತಲು. ಸಂಜೆ ಮಗಳ ಓದುವಾಗ ಎದುರು ಕೂತು ಕಾಫಿ ಚಪ್ಪರಿಸುತ್ತಿದ್ದ ಅಪ್ಪನ ಹುಮ್ಮಸ್ಸಿನುಸಿರು ತಾಕುತ್ತಿಲ್ಲ... ಇವತ್ತು ಏನು ಓದಿದೆ ಎಂದು ಆಸೆಗಣ್ಣಿನಿಂದ ತಲೆ ನೀವುತ್ತಿದ್ದ ಕೈಬೆರಳುಗಳ ನವಿರುತನ ಸೋಕುತ್ತಿಲ್ಲ... ಏನಾದರು ಬೇಕಾ ಎಂದು ಔಪಚಾರಿಕತೆಗಾದರೂ ವಿಚಾರಿಸುತ್ತಿದ್ದ ಅಪ್ಪನ ದನಿ ಕೇಳುತ್ತಿಲ್ಲ...



ಜರೀನಾಗೆ ಉಸಿರುಗಟ್ಟಿದಂತಾಯಿತು. 'ಫಹೀಂಗೆ ಸಾಮಾನ್ಯ ಜ್ವರ, ಭಯ ಪಡುವುದೇನೂ ಇಲ್ಲ' ಅಂತ ಅಧಿಕಾರಿಗಳು ಬಂದು ಹೇಳಿದ್ದರೂ ಅಕ್ಕಪಕ್ಕದವರು ಹತ್ತಿರ ಸುಳಿಯಲಿಲ್ಲ... ಹದಿನೈದು ವರ್ಷದ ಈ ವಠಾರದ ಒಡನಾಡಿಗಳ್ಯಾರೂ ತಮಗಾಗಿ ಒಂದು ಚಿಕ್ಕ ನಿಟ್ಟುಸಿರು ಬಿಡಲಿಲ್ಲ... ಅಪ್ಪನ ಸಾವು ತಮ್ಮ ಒಳ ಜಗತ್ತನ್ನು ಸುಟ್ಟುಬಿಟ್ಟರೆ ಕೊರೊನಾ ವೈರಾಣು ಹೊರ ಜಗತ್ತನ್ನು ತಮ್ಮ ಪಾಲಿಗೆ ಇಲ್ಲವಾಗಿಸಿದೆ...

ಅಕ್ಕನ ಬಿಸಿ ಅಪ್ಪುಗೆಯಲ್ಲಿ ತಣ್ಣಗಾಗುತ್ತ ಬಂದ ಅಜ್ರ 'ದೀದಿ ಹೊಟ್ಟೆ ಹಸೀತಾ ಅದೆ... ಮನೆಕೂ ಜಾಯಂಗೆ' ಅಂತ ಕ್ಷೀಣವಾಗಿ ಕೇಳಿಕೊಂಡ. ಅಪ್ಪನ ಸಾವಿನಿಂದ ಇನ್ನೂ ಸುಧಾರಿಸಿಕೊಳ್ಳಲಾಗದ ಅವ್ವ ಇನ್ನೂ ಚಾಪೆಯನ್ನೇ ಆಶ್ರಯಿಸಿದ್ದಾಳೆ. ಅವಳಿಗೆ ಗಂಡನ ದಿಢೀರ್ ಸಾವು ಸಂಕಟದ ತೊರೆಯಾಗಿದ್ದರೆ; ತಿಂಗಳೊಪ್ಪತ್ತು ಹೇಗೋ ನೀಸಿದ ಸಂಸಾರ ಈಗ ಮುಂದೆ ಹೇಗೆ? ಮಕ್ಕಳಿಗಿಕ್ಕಲು ಮನೆಯಲ್ಲಿ ಏನೂ ಇಲ್ಲವಲ್ಲ ಎಂಬ ಕೊರಗು ಕೊರೆಯುತ್ತಿದೆ. ಈ ನರಳಾಟದ ನಡುವೆ ಸಿಲಿಕಾನ್ ಲೇಔಟಿನ ಒಡೆಯ ಉಚಿತವಾಗಿ ದಿನಸಿ ವಿತರಿಸುತ್ತಾರೆಂಬ ಸುದ್ದಿ ಫಹೀಂಳ ಕಿವಿಗೆ ಬಿತ್ತು. ಕೊರೊನಾದಿಂದಾಗಿ ಹೊರ ಸಂಪರ್ಕವನ್ನೇ ಕಡಿದುಕೊಂಡಿದ್ದ ಕಿಂಡಿಯಿಂದ ನೂಲೆಳೆಯಷ್ಟು ಬೆಳಕು ಕಂಡು ಕೈಕಾಲಿಗೆ ಶಕ್ತಿ ಬಂದಂತಾಗಿ ಚೀಲ ಹಿಡಿದು ಹೊರಟಳು. ಆದರೆ ವಿಷಯ ತಿಳಿದ ಜರೀನಾ ಅವ್ವನನ್ನು ತಡೆದು ತಾನೇ ಹೊರಟಿದ್ದಳು. ಆ ಸಿಲಿಕಾನ್ ಲೇಔಟ್ ಯಾವ ಕಡೆಗಿದೆ ಅಂತ ತಿಳಿಯದು. ಆದರೂ ತಮ್ಮ ಬೀದಿಯವರ ಓಡಾಟದ ಸುಳಿವನ್ನು ಹಿಡಿದು ತಮ್ಮನನ್ನು ಜೊತೆ ಮಾಡಿಕೊಂಡು ಹೊರಟು ಬಂದಿದ್ದಳು. ಸ್ಕೂಲಿಗೆ ನಡೆದು ಹೋಗುವಾಗ ಯಾರಾದರು ಹುಡುಗರು ತನ್ನ ರೇಗಿಸಿದರೆ ಸಾಕು ಅಳು ಬಂದಂಗಾಗುತ್ತಿತ್ತು. ತರಗತಿಯಲ್ಲಿ ಟೀಚರ್ ಯಾರಿಗಾದರೂ ಬೈದರೆ ಸಾಕು ತಾನೇ ಬೈಸಿಕೊಂಡಂತೆ ಪೆಚ್ಚಾಗುತ್ತಿದ್ದಳು. ಇವತ್ತು ಧೈರ್ಯ ಮಾಡಿ ಗುಂಪಿನೊಳಗೆ ನುಸುಳಿ ದಿನಸಿ ಪಡೆಯಲು ಬಂದಿದ್ದಳು. ಆದರೆ ಸಿಲಿಕಾನ್ ಲೇಔಟ್‌ನ ಗೇಟು ತೆರೆದಿರಲಿಲ್ಲ. ಆದರೂ ಈಗಿಲ್ಲದಿದ್ದರೆ ಮುಂದಿನ ಗಳಿಗೆಗೆ ಗೇಟು ತೆರೆಯಬಹುದೆಂಬ ನಿರೀಕ್ಷೆಯಲ್ಲಿ ತುಡಿಯುತ್ತಿದ್ದ ಜೀವವನ್ನು ಬಿಗಿಮುಷ್ಟಿಯಲ್ಲಿರಿಸಿಕೊಂಡು ಬೆಳಗ್ಗೆಯಿಂದಲೂ ಕಾದಿದ್ದಳು. ಈಗ ತಮ್ಮ ಹಸಿವು, ಮನೆಗೋಗಾನೆ ಅಂತ ಕೊರಗಿದಾಗ ಪೂರ್ಣ ನಿರಾಶೆ ಕವಿಯಿತು. ಈ ನಿರಾಶೆಗೋ ಉರಿ ಬಿಸಿಲಿಗೋ ಅಪ್ಪ ಇನ್ನಿಲ್ಲ ಎಂಬ ಕಟು ವಾಸ್ತವಕ್ಕೋ, ಅವ್ವನ ನಿಶ್ಶಕ್ತಿ ಅರಿವಿಗೆ ಬಂದದ್ದಕ್ಕೋ, ತನ್ನ ಸ್ವಭಾವಜನ್ಯ ಸಂಕೋಚ, ಅಳುಕುಗಳು ಒಳಗೊಳಗೇ ಹಿಂಡಿದ್ದಕ್ಕೋ ಇವತ್ತು ಹಿಡಿ ದಿನಸಿಯೂ ಇಲ್ಲವೆಂಬ ರಣ ಸುಳಿವಿಗೋ ಕಣ್ಣಿಗೆ ಕತ್ತಲೆ ಕವಿದಂತಾಯಿತು. ಜರೀನಾ ತಮ್ಮನ ಬಿಗಿಯಾಗಿ ಹಿಡಿದುಕೊಂಡು ಕಣ್ಣುಮುಚ್ಚಿಕೊಂಡಳು. ತಮ್ಮನೂ ದೀದೀ, ದೀದೀ ಅಂತ ಕರೆಯುತ್ತಿದ್ದ ಮೊರೆ ಎಲ್ಲೋ ಪಾತಾಳದಿಂದ ಅಸ್ಪಷ್ಟವಾಗಿ ಕೇಳುತ್ತಿರುವಂತೆ ಭಾಸವಾಗುತ್ತಿತ್ತು.

ಜರೀನಾ ನಡುಗಿದಳು.

'ಏ! ಯಾಕಮ್ಮ ಇಲ್ಲಿ ನಿಂತಿದ್ದಿ?' ಎಂದು ಯಾರೋ ಕೂಗಿದಾಗಲೇ ಜರೀನಾಗೆ ಎಚ್ಚರ. ನಿಧಾನಕ್ಕೆ ಕಣ್ಣು ತೆರೆದಳು. ಇವನು ತಮ್ಮ ಬೀದಿಯ ವೇಲಣ್ಣ! ಜರೀನಾ ಅಸಹಾಯಕಳಾಗಿ ಮುಚ್ಚಿದ ಗೇಟಿನ ಕಡೆಗೆ ಕಣ್ಣು ತೋರಿದಳು. ಅವನು 'ಇವತ್ತಿಂದ ದಿನಸಿ ಕೊಡೋದನ್ನ ನಿಲ್ಲಿಸಿಬುಟ್ಟವ್ರೆ ಬ್ಯಾಡನಡಿ. ಮನೆ ಹತ್ರ ಮಾಲೀಕರ ಆಳು ಬಂದು ನಿಮೌವ್ವನ ಜ್ವತೆ ಮಾತಾಡ್ತಿದ್ದ. ಹೋಗು ಅದೇನು ನೋಡು. ಇಲ್ಲಿ ಗುಂಪು ಸೇರಿದ್ದಾರೆ ಅಂತ ಪೊಲೀಸ್ನೋರು ಬತ್ತಾರಂತೆ ನಡಿ, ನಡಿ' ಎಂದವನು ಸರಸರನೆ ಸರಿದುಹೋದ.

ಜರೀನಾಗೆ ಏನೂ ಸ್ಪಷ್ಟವಾಗಲಿಲ್ಲ. ತಮ್ಮ ಹಸಿವು ಅಂತಿದ್ದಾನೆ... ಅಮ್ಮ ಏಳಲಾಗದೆ ಮಲಗಿದ್ದಾಳೆ... ಗೇಟು ಮುಚ್ಚಿದೆ ಈ ಚಿತ್ರಗಳು ಅಪ್ಪ ತಂದುಕೊಟ್ಟಿದ್ದ ಭೂಪಟದ ಗೋಳದಂತೆ ತಿರುಗುತ್ತಿದ್ದವು... ■